

ಎಸ್‌ಎಸ್‌ಎಲ್‌ಸಿ ಓದಕ್ಹತ್ತಿದ್ದ ಹಿರಿಮಗ ಮಿಂಗೇಲ್ ತನ್ನ ಜಾಯಿಂಟ್ ಸ್ಟಡಿ ಮುಗಿಸಿಕೊಂಡ ಮನಿಗೆ ಬಂದಿದ್ದ. ಸಂಜಿ ಮುಂದ ಸಾಲಿ ಮುಗದ ಎರಡ ತಾಸದ ಮಟ, ಹುಡುಗರಿಗೆ ಟ್ಯೂಷನ್ ಹೇಳತಿದ್ದರು ಸಾಲ್ಯಾಗ. ಹತ್ತಾರ ಹುಡಗರ ಜೋಡಿ ಇವನೂ ಹೋಗತಿದ್ದ ಅಲ್ಲಿ. ಅದಕ್ಕೂ ಮೊದಲ ದಿನದ ಸಂಜಿ ಪೂಜಿ ಇರ್ತಿತ್ತು. ಹಿಂಗಾಗಿ ಅಂವಾ ಮನ್ಯಾಗಿನ ಸಂಜಿ ಪ್ರಾರ್ಥನೆಗೆ ಹಾಜರಿರಬೇಕು, ರಿಕಾಮಿ ತಪ್ಪಸಬಾರದು ಅನ್ನೂ ಮನೆಯ ಹಿರಿಯರ ಅಲಿಖಿತ ನಿಬಂಧನೆಯಿಂದ ವಿನಾಯಿತಿ ಸಿಕಿತ್ತು. ಆ ನಿಯಮ ಉಳಿದ ಎಲ್ಲ ಸಂದರ್ಭಗಳಲ್ಲಿ ಕಡ್ಡಾಯವಾಗಿ ಪಾಲನೆಯಾಗಬೇಕ. ಅದಕ್ಕ ಅಪವಾದ ಅನ್ನೂದ ಇರಲಿಲ್ಲ.

"ಅವ್ವಾ, ಅಪ್ಪಾ ಎಲ್ಲಿ?''

"ಯಾಕ, ಏನಾಯಿತು?''

"ಅಪ್ಪಾನ ಜಿಗರಿ ದೋಸ್ತ ಜಯಾ ನಿಂಬಾಳ್ಕರ ಕಾಕಾನ ಮನಿ ಮುಂದ ಮಸ್ತ ಮಂದಿ ಕೂಡ್ಯೈತಿ. ಮನಿ ಮುಂದ ಪೊಲೀಸ್ ಜೀಪ್ ನಿಂತ್ಯೈತಿ''.

"ಯಾಕೋ ಏನಾಯಿತು ಆ ಭಾಡಕೊ ನಿಂಬಾಳ್ಕರಗ'' ವೈನಿ ಒಳಗಿಂದ ಕಕ್ಕಲಾತಿಯಿಂದ ಕೇಳಿದಳು.

"ಅತ್ಯಾ, ಹಸಿವಾಗಿತ್ತು, ಕತ್ತಲಾಗಿತ್ತ ಬ್ಯಾರೆ. ಅಲ್ಲೇ ನಿಂತರ, ಮನಿಗೆ ಬರೂದು ತಡ ಆಗ್ತದಂತ ನಾ ಹಂಗ ಓಡಿ ಬನ್ನಿ''.

"ಇರಲಿ ಬಿಡು. ನಾಳೆ ಏನ ಅನ್ನೂದು ಗೊತ್ತಾಗ್ತದ. ಈಗ ಹಸದ ಬಂದಿ ಊಟ ಮಾಡ ನಡಿ'' ಎಂದು ಅವನನ್ನು ಹೊರಡಿಸಿದೆ.

ಮಿಂಗೇಲ್ ಕೈಕಾಲು ತೊಳೆದುಕೊಂಡು ಬಂದು ನಮ್ಮ ಜೋಡಿ ಊಟಕ್ಕೆ ಸೇರಿಕೊಂಡ. ಸಾಲಾಗಿ ಎಲ್ಲಾರೂ ಮಣಿ ಮ್ಯಾಲ ಕೂತಿದ್ದರು. ಇವರ ಕೂಡು ಜಾಗದಾಗಿನ ದೊಡ್ಡ ಮಣಿ ಖಾಲಿ ಇತ್ತು.

***

ಜಯಂತ ನಿಂಬಾಳ್ಕರ್, ಸಂಗಮ ಚೌಗಲೆ, ಸುಹಾಸ ಶಿರೋಡೆಕರ್, ಆಸಿಫ್ ಟಿನ್ನಮೇಕರ್ ಮತ್ತ ಪೀಟರ್ ಪಿಂಟೊ ಅವರು ನಮ್ಮವರ ಜಿಗ್ರಿ ದೋಸ್ತರು. ಕನ್ನಡ ಸಾಲ್ಯಾಗಿಂದ ಒಂದ ಕಡೆ ಓದಿದವರು. ಯಾರೂ ಊರ ಬಿಟ್ಟ ಹೊರಗ ದುಡಿಲಿಕ್ಕೆ ಹೋಗಲಿಲ್ಲ. ಊರಾಗ ತಮಗ ಪಸಂದಾಗಿರೂ ಹ್ವಾರೆ ಮಾಡಕೋತ ಜೀವನ ನಡಸ್ಯಾರ. ಎಲ್ಲರಿಗೂ ಸ್ವಂತ ಮನೆಗೋಳು ಅದಾವು. ಹಿರ್ಯಾರು ಹೊಲ, ತ್ವಾಟ ಮಾಡಿ ಇಟ್ಟಾರ.

ಇವರಿಗೆ ಎಲ್ಲರೆ ಹೋಗಿ ಕೆಲಸ ಮಾಡೂದು ಅಂದ್ರ ಮೈಮ್ಯಾಲ ಮುಳ್ಳ ಏಳತಾವು. ಉಂಡುಟ್ಟು ಆರಾಮ ಇರಾಕ ಅವರೇನು ಮನಿ ಬಿಟ್ಟ, ಊರ ಬಿಟ್ಟ ದೂರ ಹೋಗಬೇಕಾಗಿರಲಿಲ್ಲ. ಹೇಳಾಕ ಒಂದ ಕೆಲಸ ಇರಲಿ ಅಂತ ಒಂದೊಂದ ದಂಧೆ ಮಾಡಲಿಕ್ಹತ್ಯಾರ. ಪೀಟರ್ ಪಿಂಟೊ ಪೇಂಟಿನ ಅಂಗಡಿ ಇಟಗೊಂಡಿದ್ರ, ಆಸಿಫ್ ಟಿನ್ನಮೇಕರ ಟ್ರಂಕು, ಕಪಾಟು ಮಾಡೂ ವರ್ಕಶಾಪ್ ಇಟಗೊಂಡಾನ, ಜಯಂತ ನಿಂಬಾಳ್ಕರ ಕಿರಾಣಿ ಅಂಗಡಿ ನಡಸ್ತಾನ. ಸಂಗಮ ಚೌಗಲೇ ಟೇಲರಿಂಗ ಸಾಮಾನ ಮಾರೂ ಅಂಗಡಿ ಇಟ್ಟಾನ ಮತ್ತ